RNU AIR DHARWAD

# OCTOBER 13, 2024

# AKASHAVANI - DHARWAD

# PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- **ಸವದತ್ತಿ ಯಲ್ಲಮ್ಮನ ಗುಡ್ಡದಲ್ಲಿ,** ವಿಮುಕ್ತ ದೇವದಾಸಿಯರ ಉಪಜೀವನ ಸಂಕೀರ್ಣಕ್ಕೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಇಂದು ಚಾಲನೆ.
- **ಪಿ.ಎಂ. ಸೂರ್ಯ ಘರ್ ಯೋಜನೆ;** ನವೀಕರಿಸಬಹುದಾದ ಇಂಧನ ವಲಯಕ್ಕೆ, 500 ಕೋಟಿ ರೂಪಾಯಿ ಮೀಸಲು – ಪ್ರಲ್ಹಾದ್ ಜೋಶಿ.
- **ಭಾರತದ ಬಹುತ್ವ ಸಂಸ್ಕೃತಿಯ ಉಳಿವಿಗೆ,** ಸಮತೆ–ಮಮತೆಗಳ ಪರಂಪರೆ ಅಗತ್ಯ – ಬರಗೂರು ರಾಮಚಂದ್ರಪ್ಪ.
- **ಕೆರೆಮನೆ ಸಂಸ್ಥೆಯ,** ಶ್ರೀ ಇಡಗುಂಜಿ ಮಹಾ ಗಣಪತಿ ಯಕ್ಷಗಾನ ಮಂಡಳಿಗೆ, ಯುನೆಸ್ಕೋ ಮಾನ್ಯತೆ.

<><><>

**ಈಗ ವಾರ್ತೆಗಳ ವಿವರ**

<><><>

**ಬೆಳಗಾವಿ ಜಿಲ್ಲೆ, ಸವದತ್ತಿಯ** ಶ್ರೀ ರೇಣುಕಾ ಯಲ್ಲಮ್ಮ ಗುಡ್ಡದಲ್ಲಿ, ವಿಮುಕ್ತ ದೇವದಾಸಿಯರಿಗೆ, ಅನುಸೂಚಿತ ಜಾತಿ ಮತ್ತು ಬುಡಕಟ್ಟು ಉಪ ಯೋಜನೆ ಅಡಿ, 48 ಕುಟುಂಬಗಳಿಗೆ ಉಪಜೀವನಕ್ಕೆ ಅವಕಾಶ ಕಲ್ಪಿಸಲಾಗಿದೆ. ವಿಮುಕ್ತ ದೇವದಾಸಿಯರಿಂದ ಸಂಚಾಲಿತ, ಸ್ತ್ರೀ ಶಕ್ತಿ ಸ್ವ ಸಹಾಯ ಸಂಘಗಳು ತಯಾರಿಸಿದ, ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟಕ್ಕಾಗಿ, ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, 10 ಕೋಟಿ ರೂಪಾಯಿ ವೆಚ್ಚದಲ್ಲಿ, ಎರಡು ಎಕರೆ ಪ್ರದೇಶದಲ್ಲಿ, 48 ವಾಣಿಜ್ಯ ಮಳಿಗೆಗಳು ಹಾಗೂ ಸುಸಜ್ಜಿತ ಅತಿಥಿ ಗೃಹಗಳನ್ನು ನಿರ್ಮಿಸಿದೆ.

<><><>

**ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ,** ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಸೇರಿದಂತೆ, ಸಚಿವ ಸಂಪುಟದ ಹಿರಿಯ ಸಚಿವರು, ಸ್ಥಳೀಯ ಜನ ಪ್ರತಿನಿಧಿಗಳು ಪಾಲ್ಗೊಂಡು, ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಿದ್ದಾರೆ.

<><><>

**‘ರಾಜ್ಯದ ಭಕ್ತಾದಿಗಳು ಸೇರಿದಂತೆ,** ಮಹಾರಾಷ್ಟ್ರ, ಗೋವಾ, ಆಂಧ್ರಪ್ರದೇಶದಿಂದ, ಶ್ರೀ ಯಲ್ಲಮ್ಮ ದೇವಿ ದರ್ಶನಕ್ಕೆ, ಲಕ್ಷಾಂತರ ಭಕ್ತರು ಆಗಮಿಸುತ್ತಾರೆ. ಭಕ್ತಾದಿಗಳಿಗೆ ಸಕಲ ಸೌಕರ್ಯ ಕಲ್ಪಿಸಲು, ಮಾದರಿ ಯೋಜನೆಗೆ ಮುಖ್ಯಮಂತ್ರಿಯವರು ಚಾಲನೆ ನೀಡಲಿದ್ದಾರೆ’ ಎಂದು, ಬೆಳಗಾವಿ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ತಿಳಿಸಿದ್ದಾರೆ.

<><><>

**ಕೇಂದ್ರ ಸರ್ಕಾರ,** ಪ್ರಧಾನಮಂತ್ರಿ ಸೂರ್ಯ ಘರ್ ಯೋಜನೆಯಡಿ, ನವೀಕರಿಸಬಹುದಾದ ಇಂಧನ ವಲಯಕ್ಕೆ, 500 ಕೋಟಿ ರೂಪಾಯಿ ಮೀಸಲಿರಿಸಿದೆ ಎಂದು, ಕೇಂದ್ರ ನವ ಹಾಗೂ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ ಪ್ರಲ್ಹಾದ್ ಜೋಶಿ ತಿಳಿಸಿದ್ದಾರೆ. ಹುಬ್ಬಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಿ.ಎಂ. ಸೂರ್ಯ ಘರ್ ಯೋಜನೆಯಡಿ, ನವೀನ ಯೋಜನೆಗಳ ಅನು ್ಠಾನ ಮತ್ತು ಘಟಕಕ್ಕಾಗಿ 500 ಕೋಟಿ ರೂಪಾಯಿ ನಿಗದಿ ಪಡಿಸಿ, ಮಾರ್ಗಸೂಚಿ ಹೊರಡಿಸಲಾಗಿದೆ ಎಂದರು. ನ್ಯಾ ’ನಲ್ ಇನ್‌ಸ್ಟಿಟ್ಯೂಟ್ ಆಫ್ ಸೋಲಾರ್ ಎನರ್ಜಿ ಸಂಸ್ಥೆ, ನವೀನ ಯೋಜನೆಗಳ ಘಟಕಕ್ಕಾಗಿ, ಅನುಮತಿ ನೀಡಲಿದೆ. ಆಯ್ಕೆಯಾದ ಯೋಜನೆಗಳಿಗೆ 30 ಕೋಟಿ ರೂಪಾಯಿ ವರೆಗೆ, ಆರ್ಥಿಕ ನೆರವು ಪಡೆಯಲು ಅವಕಾಶವಿದೆ ಎಂದು, ಸಚಿವ ಜೋಶಿ ಹೇಳಿದರು.

<><><>

**ಪಶ್ಚಿಮಘಟ್ಟದ ಭಾಗ ಹಾಗೂ ‘ಯುನೆಸ್ಕೋ’ ವಿಶ್ವ ಪಾರಂಪರಿಕ ತಾಣ,** ಗದಗ ಜಿಲ್ಲೆ ಕಪ್ಪತಗುಡ್ಡ ವನ್ಯಜೀವಿ ಧಾಮ, 32 ಸಾವಿರದ 346 ಹೆಕ್ಟರ್ ಪ್ರದೇಶದಲ್ಲಿ ಹಬ್ಬಿ ಹರಡಿದೆ. ನಾಲ್ಕು ನೂರಕ್ಕೂ ಹೆಚ್ಚು ಅಪರೂಪದ ಔಷಧೀಯ ಸಸ್ಯ, ಗಿಡ ಮೂಲಿಕೆಗಳಿಗೆ ಹೆಸರುವಾಸಿಯಾಗಿದೆ. ರಾಜ್ಯ ಪ್ರವಾಸೋದ್ಯಮ ಇಲಾಖೆ, ಪ್ರವಾಸಿಗರನ್ನು ಚಾರಣಕ್ಕೆ ಸೆಳೆಯಲು ವಿಶೇಷ ಯೋಜನೆ ರೂಪಿಸಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ತಿಳಿಸಿದ್ದಾರೆ.

<><><>

**ಕಪೋತಗಿರಿಯ ನಂದಿವೇರಿಮಠದ,** ಶ್ರೀ ಶಿವಕುಮಾರ ಸ್ವಾಮೀಜಿ, ಶ್ರೀ ಮಠಕ್ಕೆ ಸೇರಿದ 10 ಎಕರೆ ಜಮೀನಿನಲ್ಲಿ ಪ್ರಾಯೋಗಿಕವಾಗಿ ಔಷಧೀಯ, ಸುಗಂಧ ದ್ರವ್ಯ ಮತ್ತು ಕಾಡು ಹಣ್ಣಿನ ಸಸಿಗಳನ್ನು, ಸಾಮುದಾಯಿಕ ಸಮಭಾಗಿತ್ವದಲ್ಲಿ ಬೆಳೆಸಲು ಯೋಜಿಸಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಶ್ರೀ ಶಿವಕುಮಾರ ಸ್ವಾಮೀಜಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

**ಶ್ರೀ ಶಿವಕುಮಾರ ಸ್ವಾಮೀಜಿ ಧ್ವನಿ 40 ಸೆಕೆಂದುಗಳು**

<><><>

**ಕಾವೇರಿ ನದಿ, ಐದನೇ ಹಂತದ** ಕುಡಿಯುವ ನೀರಿನ ಯೋಜನೆ ಜಾರಿಯಿಂದ, ಬೆಂಗಳೂರಿನ 50 ಲಕ್ಷ ಜನರಿಗೆ ಅನುಕೂಲವಾಗಲಿದೆ ಎಂದು, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಬೆಂಗಳೂರಿನಲ್ಲಿ ತಿಳಿಸಿದ್ದಾರೆ. ಬುಧವಾರ, 16ನೇ ತಾರೀಖು, ಬೆಂಗಳೂರಿಗೆ ವಿಶೇ ’ ದಿನ. ತೊರೆ ಕಾಡನಹಳ್ಳಿಯಲ್ಲಿ 5ನೇ ಹಂತದ ಯೋಜನೆಗೆ ಚಾಲನೆ ನೀಡಲಾಗುವುದು. ಬೆಂಗಳೂರಿನ ಮನೆ, ಮನೆಗೆ ಕಾವೇರಿ ನದಿ ನೀರು ಪೂರೈಕೆಯಾಗಲಿದೆ ಎಂದರು.

<><><>

**ಬೆಂಗಳೂರು ಮಹಾನಗರ ಪಾಲಿಕೆ,** ಬರುವ 17ನೇ ತಾರೀಖು, ಬೀದಿ ನಾಯಿ ಉತ್ಸವ ‘ಕುಕುರ್ ತಿಹಾರ್’ ಆಚರಿಸಲು, ಸಿದ್ಧತೆ ಕೈಗೊಂಡಿದೆ ಎಂದು, ಪಶು ಸಂಗೋಪನೆ ವಿಭಾಗದ ವಿಶೇಷ ಆಯುಕ್ತ ವಿಕಾಸ ಕಿಶೋರ ಸುರಳ್ಕರ್ ತಿಳಿಸಿದ್ದಾರೆ. ಖಾಸಗಿ ಸ್ವಯಂಸೇವಾ ಸಂಸ್ಥೆಗಳ ಸಹಭಾಗಿತ್ವದಲ್ಲಿ, ಆಯಾ ವಾರ್ಡಿನ ಉಪಾಹಾರ ಗೃಹಗಳೊಂದಿಗೆ, ಸಮನ್ವಯ ಸಾಧಿಸಿ, 4 ವಾರ್ಡ್‌ಗಳ ಪೌರ ಕಾರ್ಮಿಕರ ಸಹಯೋಗದಲ್ಲಿ, ಪ್ರಾಯೋಗಿಕವಾಗಿ, ಬೀದಿ ನಾಯಿಗಳಿಗೆ ಆಹಾರ ನೀಡುವ ಕಾರ್ಯ, ಆರಂಭವಾಗಲಿದೆ

ಎಂದರು. CO-EXISTENCE CAMP ON LOCALITY ಮತ್ತು BITE FREE LOCALITY ಯೋಜನೆ ಅಡಿ, ಮಾನವ–ಪ್ರಾಣಿ ಸಂಘರ್ಷಗಳನ್ನು ಕಡಿಮೆ ಮಾಡಲು ಈ ಉಪಕ್ರಮ ಎಂದು, ಅವರು ತಿಳಿಸಿದ್ದಾರೆ.

<><><>

**ಈಗ ಪ್ರಕಟಣೆ..**

**ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಭಾರತದ ಬಹುತ್ವ ಸಂಸ್ಕೃತಿಯನ್ನು ತಿಳಿಸಿದ,** ಬುದ್ಧ, ಬಸವ, ಅಂಬೇಡ್ಕರ್, ಸ್ವಾಮಿ ವಿವೇಕಾನಂದ, ಕುವೆಂಪು ಅವರಂತಹ ದಾರ್ಶನಿಕರ ವಿಚಾರಧಾರೆಗಳನ್ನು ಉಳಿಸಲು, ಸಮತೆ–ಮಮತೆಗಳ ಪರಂಪರೆ ಅಗತ್ಯ ಎಂದು, ಸಾಹಿತಿ ಡಾಕ್ಟರ್ ಬರಗೂರು ರಾಮಚಂದ್ರಪ್ಪ ಅಭಿಪ್ರಾಯಪಟ್ಟಿದ್ದಾರೆ. ತುಮಕೂರು ದಸರಾ ಉತ್ಸವ ಅಂಗವಾಗಿ, ನಗರದ ಗುಬ್ಬಿ ವೀರಣ್ಣ ಕಲಾ ಕ್ಷೇತ್ರದಲ್ಲಿ ಸಂವಾದ ಕಾರ್ಯಕ್ರಮ ಉದ್ಘಾಟಿಸಿ, ಅವರು ಮಾತನಾಡಿದರು. ಗೃಹ ಖಾತೆ ಸಚಿವ ಡಾಕ್ಟರ್ ಜಿ. ಪರಮೇಶ್ವರ್ ಮಾತನಾಡಿ, ಭಾರತದ ಸಂಸ್ಕೃತಿ ಬದುಕನ್ನು ಕಟ್ಟಿಕೊಳ್ಳಲು ಪ್ರೇರೇಪಿಸುತ್ತದೆ ಎಂದರು.

<><><>

**ಉತ್ತರಕನ್ನಡ ಜಿಲ್ಲೆ ಹೊನ್ನಾವರ ತಾಲೂಕು** ಗುಣವಂತೆಯ, ಶ್ರೀ ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿ, ಕೆರೆಮನೆ ಸಂಸ್ಥೆಗೆ, ವಿಶ್ವ ಸಂಸ್ಥೆಯ ಮಾನ್ಯತೆ ದೊರೆತಿದೆ. ಯುನೆಸ್ಕೋ 10ನೇ ಅಧಿವೇಶನದಲ್ಲಿ, ಮಂಡಳಿಯನ್ನು ಅಧಿಕೃತವಾಗಿ ಗುರುತಿಸಿ, ಅಮೂರ್ತ ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆ ಹಾಗೂ ಯುನೆಸ್ಕೋ ಆಂತರಿಕ ಸಮಿತಿಗೆ ಸಲಹೆ ನೀಡಲು, ಮಂಡಳಿ ಮಾನ್ಯತೆ ನೀಡಿದೆ. 90ನೇ ವರ್ಷದ ಸಂಭ್ರಮದಲ್ಲಿರುವ, ಶ್ರೀ ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿಯ ನಿರ್ದೇಶಕ, ಕೆರೆಮನೆ ಶಿವಾನಂದ ಹೆಗಡೆ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

**ಕೆರೆಮನೆ ಶಿವಾನಂದ ಹೆಗಡೆ ಧ್ವನಿ 40 ಸೆಕೆಂದುಗಳು**

<><><>

**ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ,** ಆಕರ್ಷಣೀಯ ಜಂಬೂ ಸವಾರಿಗೆ, ಅರಮನೆಯ ಮುಂಭಾಗದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಶುಭ ಕುಂಭ ಲಗ್ನದಲ್ಲಿ, ಚಿನ್ನದ ಅಂಬಾರಿಯಲ್ಲಿ ವಿರಾಜಮಾನಳಾಗಿದ್ದ ನಾಡದೇವಿ ತಾಯಿ ಚಾಮುಂಡೇಶ್ವರಿ ದೇವಿಗೆ, ಪುಷ್ಪಾರ್ಚನೆ ಮಾಡಿ, ಚಾಲನೆ ನೀಡಿದರು. 750 ಕಿಲೋ ತೂಕದ ಚಿನ್ನದ ಅಂಬಾರಿಯನ್ನು, ಸತತ 5ನೇ ಬಾರಿಗೆ ಹೊತ್ತ ಆನೆ ಅಭಿಮನ್ಯು, ಗಜ ಗಾಂಭೀರ್ಯದಿಂದ ಬನ್ನಿ ಮಂಟಪದತ್ತ ಹೆಜ್ಜೆ ಹಾಕಿತು. ಕುಮ್ಕಿ ಆನೆಗಳಾದ ಲಕ್ಷ್ಮೀ ಮತ್ತು ಹಿರಣ್ಯ ಜೊತೆಯಾದವು. ಪೊಲೀಸರು ಮೂರು ಸುತ್ತು ಕುಶಾಲ ತೋಪುಗಳನ್ನು ಹಾರಿಸಿದರು.

<><><>

**ಜಂಬೂ ಸವಾರಿ ಮೆರವಣಿಗೆ** ಮೈಸೂರಿನ ರಾಜ ಮಾರ್ಗಗಳ ಮೂಲಕ, ಬನ್ನಿ ಮಂಟಪ ತಲುಪಿತು. ಪಂಜಿನ ಕವಾಯತಿನಲ್ಲಿ, ರಾಜ್ಯಪಾಲ ಥಾವರಚಂದ ಗೆಹ್ಲೋಟ್ ಮುಖ್ಯ ಅತಿಥಿಯಾಗಿ ಭಾಗವಹಿಸಿ, ಗೌರವ ವಂದನೆ ಸ್ವೀಕರಿಸಿದರು.

<><><>

**ಜಂಬೂ ಸವಾರಿ** ಸಂದರ್ಭದಲ್ಲಿ, ನಾಡಿನ ಕಲೆ, ಸಾಹಿತ್ಯ, ಸಂಸ್ಕೃತಿ, ಪರಂಪರೆಯನ್ನು ಪ್ರತಿಬಿಂಬಿಸಿದ, ಸ್ತಬ್ಧ ಚಿತ್ರಗಳ ಮೆರವಣಿಗೆ, ಲಕ್ಷಾಂತರ ಜನರ ಕಣ್ಮನ ಸೆಳೆಯಿತು.

<><><>

**ನಾಡಿನ ಖ್ಯಾತ ಜಾನಪದ ಕಲಾತಂಡಗಳಿಂದ** ಅತ್ಯಾಕರ್ಷಕ ನೃತ್ಯ, ವೀರಗಾಸೆ, ಕಂಸಾಳೆ, ಡೊಳ್ಳು ಕುಣಿತ, ಪಟ ಕುಣಿತ, ನಂದಿಕೋಲು ಕುಣಿತ, ಮತ್ತಿತರ ಕಲಾಪ್ರದರ್ಶನಗಳು ಜನಮನ ಸೂರೆಗೊಂಡವು.

<><><>

**ಮೈಸೂರಿನ ಅಂಬಾ ವಿಲಾಸ ಅರಮನೆಯ,** ಕರಿಕಲ್ಲು ತೊಟ್ಟಿಯಲ್ಲಿ, ಜೆಟ್ಟಿಗಳ ವಜ್ರಮುಷ್ಠಿ ಕಾಳಗ ನಡೆಯಿತು.

<><><>

**ರಾಜ ವಂಶಸ್ಥ ಯದುವೀರ ಕೃ ್ಣದತ್ತ** ಚಾಮರಾಜ ಒಡೆಯರ್, ಭುವನೇಶ್ವರಿ ದೇವಸ್ಥಾನದಲ್ಲಿ, ಬನ್ನಿ ಮರಕ್ಕೆ ವಿಶೇ ಪೂಜೆ ಸಲ್ಲಿಸಿ, ವಿಜಯ ದಶಮಿ ಹಬ್ಬಕ್ಕೆ ಚಾಲನೆ ನೀಡಿದರು.

<><><>

**ಮಂಗಳೂರಿನ, ಕುದ್ರೋಳಿ ಗೋಕರ್ಣನಾಥ ಕ್ಷೇತ್ರದಲ್ಲಿ,** ಇಂದು ವೈಭವದ ಶೋಭಾ ಯಾತ್ರೆಯ ಮೂಲಕ, 33ನೇ ವ ್ದ, ಮಂಗಳೂರು ದಸರಾ ಮಹೋತ್ಸವಕ್ಕೆ ತೆರೆ ಬೀಳಲಿದೆ.

<><><>

**ಚಿಕ್ಕಮಗಳೂರು ಜಿಲ್ಲೆ, ಶೃಂಗೇರಿ ಶಾರದಾ ಪೀಠದಲ್ಲಿ,** ಶ್ರೀ ಭಾರತೀ ತೀರ್ಥ ಸ್ವಾಮೀಜಿ ಹಾಗೂ ವಿಧುಶೇಖರ ಸ್ವಾಮೀಜಿ ಅವರ ನೇತೃತ್ವದಲ್ಲಿ, ಇಂದು ರಥೋತ್ಸವ ಹಾಗೂ ಗುರುಗಳ ಅಡ್ಡ ಪಲ್ಲಕ್ಕಿ ಉತ್ಸವ ನಡೆಯಲಿದೆ.

<><><>

**ಮರಕ್ಕೆ ಬೇರು ಎಷ್ಟು ಮುಖ್ಯವೋ,** ಜೀವನದಲ್ಲಿ ಸಂಬಂಧಗಳನ್ನು ಬಾಳಿಸಲು ನಂಬಿಕೆ ಮುಖ್ಯ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ವೀರಸೋಮೇಶ್ವರ ಭಗವತ್ಪಾದರು ಹೇಳಿದ್ದಾರೆ. ಗದಗ ಜಿಲ್ಲೆ, ರೋಣ ತಾಲೂಕು, ಅಬ್ಬಿಗೇರಿಯ, ಶ್ರೀ ಅನ್ನದಾನೇಶ್ವರ ಪ್ರೌಢಶಾಲಾ ಆವರಣದಲ್ಲಿ, ಮಾನವ ಧರ್ಮ ಮಂಟಪದಲ್ಲಿ, ಶಮೀ ಪೂಜೆ ನೆರವೇರಿಸಿ, ದಸರಾ ಶಾಂತಿ ಸಂದೇಶ ಅನುಗ್ರಹಿಸಿದರು.

<><><>

**ಮುಂದಿನ 5 ದಿನ, ರಾಜ್ಯದ ಕರಾವಳಿ,** ಮಲೆನಾಡು ಹಾಗೂ ದಕ್ಷಿಣ ಒಳನಾಡು ಜಿಲ್ಲೆಗಳಲ್ಲಿ, ಗುಡುಗು, ಮಿಂಚು ಸಹಿತ ರಭಸದ ಗಾಳಿಯೊಂದಿಗೆ, ಭಾರಿ ಮಳೆಯಾಗುವ ನಿರೀಕ್ಷೆಯಿದೆ ಎಂದು, ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಮುನ್ನೆಚ್ಚರಿಕೆ ನೀಡಿದೆ. ರಾಜ್ಯದ ಉತ್ತರ ಒಳನಾಡು ಜಿಲ್ಲೆಗಳಲ್ಲಿ, ನಾಳೆಯ ವರೆಗೆ ಗುಡುಗು, ಮಿಂಚು ಸಹಿತ ಜೋರಾದ ಗಾಳಿಯೊಂದಿಗೆ, ಭಾರಿ ಮಳೆಯಾಗುವ ಸಾಧ್ಯತೆಯಿದೆ.

<><><>

**'ಕೀಟಗಳನ್ನು ರಕ್ಷಿಸಿ; ಹಕ್ಕಿಗಳನ್ನು ಸಂರಕ್ಷಿಸಿ',** ಧ್ಯೇಯದೊಂದಿಗೆ, ವಿಶ್ವ ವಲಸೆ ಹಕ್ಕಿಗಳ ದಿನದ ಅಂಗವಾಗಿ, ನಿನ್ನೆ ಶನಿವಾರ, ರಾಜ್ಯದ ವಿವಿಧೆಡೆ ಜನ ವಿಜ್ಞಾನಿ ಪಕ್ಷಿ ವೀಕ್ಷಕರಿಂದ, ಸ್ಥಳೀಯ ಗಣತಿ ನಡೆಯಿತು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಸವದತ್ತಿ ಯಲ್ಲಮ್ಮನ ಗುಡ್ಡದಲ್ಲಿ,** ವಿಮುಕ್ತ ದೇವದಾಸಿಯರ ಉಪಜೀವನ ಸಂಕೀರ್ಣಕ್ಕೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಇಂದು ಚಾಲನೆ.
- **ಪಿ.ಎಂ. ಸೂರ್ಯ ಘರ್ ಯೋಜನೆ;** ನವೀಕರಿಸಬಹುದಾದ ಇಂಧನ ವಲಯಕ್ಕೆ, 500 ಕೋಟಿ ರೂಪಾಯಿ ಮೀಸಲು – ಪ್ರಲ್ಹಾದ್ ಜೋಶಿ.
- **ಭಾರತದ ಬಹುತ್ವ ಸಂಸ್ಕೃತಿಯ ಉಳಿವಿಗೆ,** ಸಮತೆ–ಮಮತೆಗಳ ಪರಂಪರೆ ಅಗತ್ಯ – ಬರಗೂರು ರಾಮಚಂದ್ರಪ್ಪ.
- **ಕೆರೆಮನೆ ಸಂಸ್ಥೆಯ,** ಶ್ರೀ ಇಡಗುಂಜಿ ಮಹಾ ಗಣಪತಿ ಯಕ್ಷಗಾನ ಮಂಡಳಿಗೆ, ಯುನೆಸ್ಕೋ ಮಾನ್ಯತೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>

**ಹರ್ಷ**